# ಕಾಗೆ ಜ್ವರ ಎಚ್ಚರ




**ನೆರೆಯ ಕೇರಳ ರಾಜ್ಯದಲ್ಲಿ 'ಕಾಗೆ ಜ್ವರ' ಕಾಣಿಸಿಕೊಂಡಿದೆ. ಒಂದು ಮಗುವನ್ನೂ ಬಲಿಪಡೆದಿದೆ. ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲೂ ಸೋಂಕು ಹರಡುವ ಅಪಾಯ ಇದೆ. ವೈರಸ್‌ನಿಂದ ಹರಡುವ ಈ ಜ್ವರಕ್ಕೆ ಮುನ್ನೆಚ್ಚರಿಕೆಯೇ ಮದ್ದು.**

■ ಡಾ. ಕರವೀರಪ್ರಭು ಕ್ಯಾಲಕೊಂಡ

ಮನೆಯ ಸೂರಿನ ಮೇಲೆ ಕಾಗೆ ಕುಳಿತು ಕಾ....ಕಾ...ಎಂದು ಕೂಗಿದರೆ ಅಂದು ಮನೆಗೆ ಬೀಗರು ಬರುತ್ತಾರೆಂದು ಜನಪದರು ಹೇಳುತ್ತಿದ್ದರು. ಇಂದು ಮನೆಯ ಸಮೀಪ ಕಾಗೆ ಹಾರಾಡಿದರೂ ಗಾಬರಿಗೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಾಗೆಜ್ವರ ಬಂದು ಕೇರಳದ ಮಲಪ್ಪುರಂ ಜಿಲ್ಲೆಯ ಆರು ವರ್ಷದ ಬಾಲಕ ಅಸು ನೀಗಿದ್ದಾನೆ. ಕಾಗೆ ಜ್ವರ ಕೇರಳದಲ್ಲಿ ಜನರನ್ನು ಕಂಗೆಡಿಸಿದೆ. ವೆಸ್ಟ್ ನೈಲ್ ವೈರಸ್ ಫೀವರ್ ಎಂದು ಕರೆಯಲಾಗುವ ಈ ಜ್ವರ ದಕ್ಷಿಣ ಕನ್ನಡ ಸೇರಿದಂತೆ ಕರಾವಳಿಗುಂಟ ಹರಡುವ ಆತಂಕ ಸೃಷ್ಟಿಯಾಗಿದೆ.

ಕಾಗೆಜ್ವರ ವೈರಸ್‌ನಿಂದ ಹರಡುತ್ತದೆ. ಆರ್.ಎನ್.ಎ. ಗುಂಪಿಗೆ ಸೇರಿದ ಫ್ಲಾವಿ ವೈರಸ್ ಎಂಬ ಉಪಜಾತಿಗೆ ಸೇರಿದ ವೈರಸ್ ಇದಾಗಿದ್ದು, ಝೀಕಾ ವೈರಸ್, ಡೆಂಗಿ ವೈರಸ್ ಮತ್ತು ಹಳದಿ ಜ್ವರದ ವೈರಸ್ ಕೂಡಾ ಇದೇ ಉಪ ಜಾತಿಗೆ ಸೇರಿರುತ್ತವೆ. ಕ್ಯೂಲೆಕ್ಸ್ ಸೊಳ್ಳೆಗಳ ಮುಖಾಂತರ ಈ ವೈರಸ್ ಹರಡುವುದು. ಇದು ಬೇಸಿಗೆಯಲ್ಲಿ ಹೆಚ್ಚು ಕ್ರಿಯಾಶೀಲವಾಗುವುದರಿಂದಾಗಿ ರೋಗ ಹರಡುವಿಕೆಯಲ್ಲಿ ಸಹಕರಿಸುವುದು. ಬೇಸಿಗೆಯ ಪ್ರಾರಂಭದಲ್ಲಿಯೇ ಕಾಗೆ ಜ್ವರ ಕಾಣಿಸಿಕೊಂಡಿರುವುದು ಭೀತಿಯನ್ನು ಮತ್ತಷ್ಟು ಹೆಚ್ಚಿಸಿದೆ. ಸೋಂಕು ಪೀಡಿತ ಸೊಳ್ಳೆಯ ಕಡಿತದ ಪರಿಣಾಮ ಮನುಷ್ಯರಿಗೆ ಸೋಂಕು ಹರಡುತ್ತದೆ. ಸೋಂಕಿಗೆ ಒಳಗಾದ ಕಾಗೆ ಮತ್ತು ಇತರ ಪಕ್ಷಿಗಳ ರಕ್ತ ಹೀರುವ ಮೂಲಕ ಸೊಳ್ಳೆಗಳಿಗೆ ಸೋಂಕು ತಗಲುತ್ತದೆ. ಈ ವೈರಸ್ ಸೊಳ್ಳೆಗಳ ರಕ್ತದಲ್ಲಿ ಕೆಲ ದಿನಗಳ ಕಾಲ ಸಂಖ್ಯಾಭಿವೃದ್ಧಿ ಮಾಡಿಕೊಳ್ಳುತ್ತದೆ. ವಾಸ್ತವವಾಗಿ ಈ ವೈರಸ್ ಕ್ರಮೇಣ ಸೊಳ್ಳೆಯ ಜೊಲ್ಲು ಸುರಿಸುವ ಗ್ರಂಥಿಯೊಳಗೆ ಸೇರಿಕೊಳ್ಳುತ್ತದೆ. ಸೊಳ್ಳೆಗಳು ಕಡಿದಾಗ ಈ ವೈರಸ್ ಮನುಷ್ಯನಿಗೆ ಮತ್ತು ಪ್ರಾಣಿಗಳಿಗೆ ವರ್ಗಾವಣೆಯಾಗುತ್ತದೆ.



## ಇತಿಹಾಸ

1937ರಲ್ಲಿ ಉಗಾಂಡಾದ ವೆಸ್ಟ್ ನೈಲ್ ಜಿಲ್ಲೆಯಲ್ಲಿ ಮಹಿಳೆಯೊಬ್ಬಳಲ್ಲಿ ಕಂಡು ಬಂತು. ಈ ಕಾರಣದಿಂದಲೇ ಈ ವೈರಸ್‌ಗೆ ವೆಸ್ಟ್ ನೈಲ್ ವೈರಸ್ ಎಂದು ಹೆಸರು ಬಂದಿದೆ. 1953ರಲ್ಲಿ ಮೊದಲ ಬಾರಿಗೆ ನೈಲ್ ಬೆಟ್ಟದ ಕಾಗೆಗಳಲ್ಲಿ ಮತ್ತು ಪಕ್ಷಿಗಳಲ್ಲಿ ಈ ವೈರಸ್ ಪತ್ತೆ ಹಚ್ಚಲಾಯಿತು. ಈ ಕಾರಣದಿಂದಲೇ "ಕಾಗೆ ಜ್ವರ "ಎಂಬ ಹೆಸರು ಸೇರಿಕೊಂಡಿತು. ಕುದುರೆಗಳಲ್ಲಿ ಹೆಚ್ಚು ಸಾವಿಗೆ ಕಾರಣವಾಗಿರುವ ಈ ವೈರಸ್‌ಗೆ ಲಸಿಕೆ ಇದೆ. ಸೋಂಕಿಗೀಡಾಗುವ ಮನುಷ್ಯರಿಗೆ ಸರಿಯಾದ ಲಸಿಕೆ ಇನ್ನೂ ಬಂದಿಲ್ಲ.

ಅಲ್ಲಿ ಅದು ಬಹು ಸಂಖ್ಯೆಯಲ್ಲಿ ಅಭಿವೃದ್ಧಿಯಾಗಿ ಅಸೌಖ್ಯಕ್ಕೆ ನಾಂದಿ ಹಾಡುತ್ತದೆ.ಆದರೆ ಇದು ಮನುಷ್ಯರಿಂದ ಮನುಷ್ಯರಿಗೆ ಎಂದೂ ನೇರವಾಗಿ ಹರಡುವುದಿಲ್ಲ.

## ರೋಗದ ಲಕ್ಷಣಗಳು

ಸೊಳ್ಳೆ ಕಚ್ಚಿದ 3 ರಿಂದ 14 ದಿನಗಳ ಬಳಿಕ ರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಸುಮಾರು ಶೇ.80 ರಷ್ಟು ಜನರಲ್ಲಿ ಜ್ವರದ ಯಾವುದೇ ಲಕ್ಷಣಗಳು ಕಾಣಿಸಿಕೊಳ್ಳದೆ ಇರಬಹುದು. ಶೇ.20 ರಷ್ಟು ಜನರಲ್ಲಿ ಜ್ವರ, ತಲೆನೋವಿನಂತಹ ಲಕ್ಷಣಗಳು ಪ್ರಕಟಗೊಳ್ಳಬಹುದು. ಕಾಯಿಲೆ ಮಾರಣಾಂತಿಕವಾಗಿ ಪರಿಣಮಿಸಬಹುದು. ಜ್ವರ, ತಲೆನೋವು, ಮೈ ಕೈ ನೋವು, ಸುಸ್ತು, ಆಯಾಸ, ನಡುಕ, ವಿಪರೀತ ಬೆವರುವಿಕೆ, ವಾಕರಿಕೆ, ವಾಂತಿ, ಹಸಿವಿಲ್ಲದಿರುವುದು, ಭೇದಿ, ಹೊಟ್ಟೆನೋವು ಸಾಮಾನ್ಯ. ಕೆಲವರಲ್ಲಿ ಕೆಂಪುಗುಳ್ಳೆಗಳು ಕಂಡುಬರುತ್ತವೆ. ವೈರಸ್ ಕೇಂದ್ರೀಯ ನರಮಂಡಲಕ್ಕೆ ಮುತ್ತಿಗೆ ಹಾಕಿದಾಗ ಅಪಸ್ಮಾರ, ಕತ್ತು ಬಿಗಿಯುವುದು, ಮತಿಭ್ರಮಣೆ ಉಂಟಾಗಬಹುದು.

## ಚಿಕಿತ್ಸೆ ಏನು?

ಈ ರೋಗಕ್ಕೆ ನಿಶ್ಚಿತ ಚಿಕಿತ್ಸೆ ಇಲ್ಲ. ಸಾಕಷ್ಟು ವಿಶ್ರಾಂತಿ ಬೇಕು. ಧಾರಾಳವಾಗಿ ದ್ರವ ಆಹಾರ ನೀಡಿ ರೋಗಿಯನ್ನು ಉಪಚರಿಸಬೇಕು. ಜ್ವರ ನಿಯಂತ್ರಣಕ್ಕಾಗಿ ಹಣೆಯ ಮೇಲೆ ತಣ್ಣೀರು ಪಟ್ಟಿ ಹಾಕಬೇಕು. ಜ್ವರ ಶಮನ ಗುಳಿಗೆ ಕೊಡಬೇಕು. ಮಧುಮೇಹ ಮತ್ತು ವಯಸ್ಕರಿಗೆ ವಿಶೇಷ ಕಾಳಜಿ ವಹಿಸಬೇಕಾಗುತ್ತದೆ. ಉಸಿರಾಟದ ತೊಂದರೆ ಇದ್ದಲ್ಲಿ ಅದಕ್ಕೆ ಪೂರಕವಾದ ಚಿಕಿತ್ಸೆ ನೀಡಬೇಕಾಗುತ್ತದೆ. ■